ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದ ಫೈಲ್.

ಪುಟದ ಸಂಖ್ಯೆ —2/—

ಕಡತದ ಸಂಖ್ಯೆ CE/dd/gn/309/25-

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

1) ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ SFC ಅನುದಾನದಡಿ ಕೆಆರ್‌ಐಡಿಎಲ್ ಮೂಲಕ ಕೈಗೆತ್ತಿಕೊಳ್ಳಲಾದ 19 ಕಾಮಗಾರಿಗಳ ಸಂಬಂಧ ದೂರ ಬಂದ ಹಿನ್ನಲೆಯಲ್ಲಿ ಟಿವಿಸಿಸಿ ತನಿಖೆ ಕೈಗೊಂಡು 19 ಕಾಮಗಾರಿವಾರು ವರದಿಸಿರುವಂತೆ ಒಟ್ಟು ಆಕ್ಷೇಪಣೆ ಮೊತ್ತ ರೂ.29379222/-ಗಳನ್ನು ಕಟಾವು ಮಾಡುವ ಷರತ್ತುಗೊಳಪಡಿಸಿ ಉಳಿದ ಮೊತ್ತ ಪಾವತಿಸಲು ಪ್ರತ್ಯೇಕ ಕಡತದ ಕಂಡಿಕೆ ಸಂಖ್ಯೆ:252ರಲ್ಲಿ ದಿನಾಂಕ:11-02-2025 ರಂದು ಮುಖ್ಯ ಆಯುಕ್ತರು ಅನುಮೋದನೆ ನೀಡಿರುತ್ತಾರೆ.

ಮತ್ತು ಕರ್ನಾಟಕ ಲೋಕಾಯುಕ್ತ ದಲ್ಲಿ ಸದರಿ ಕಾಮಗಾರಿಗಳ ಸಂಬಂಧ ದಾಖಲಾದ ಮತ್ತೊಂದು ಪ್ರಕರಣ ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಬಿಸಿಡಿ/675/2021/ಎಆರ್‌ಎಲ್‌ಓ-01 ಹಾಗು ಸಂಖ್ಯೆ: ಲೋಕ್/ಐಎನ್‌ವಿ(ಟಿ)/ಎಲ್‌ಎ-228/2022/ಎಇಇ-05 ದಿನಾಂಕ:31-01-2024 ರ ತನಿಖಾ ವರದಿಯಲ್ಲಿ ಸದರಿ ಕಾಮಗಾರಿಗಳನ್ನು ಪಾಲಿಕೆಯ ಟಿವಿಸಿಸಿ ರವರು ಮರು ಸ್ಥಳ ಪರಿಶೀಲನೆಯ ನಂತರ ಮೂಲ ಬಿಲ್ಲಿನಲ್ಲಿ ಈಗಾಗಲೇ ಹೆಚ್ಚುವರಿ ಮೊತ್ತವನ್ನು ಕಡಿತಗೊಳಿಸಿರುವುದರಿಂದ ಹಾಗು ಕಡಿತಗೊಳಿಸಿರುವ ಹೆಚ್ಚುವರಿ ಮೊತ್ತವು ಸರಿ ಇರುತ್ತದೆಂದು ಅಭಿಪ್ರಾಯ ಪಡಲಾಗಿದೆ.

2) ಮೇಲ್ಕಂಡ ಕಾಮಗಾರಿಗಳ ಪೈಕಿ ಜಾಬ್ ಸಂಖ್ಯೆ:015-19-000009 Improvements to CC Drain and Covering Slabs at Coconut Garden roads and Krishne Gowda Layout surroundings area in ward no 15 Dasarahalli Sub Division ಕಾಮಗಾರಿಯ ಬಿಲ್ ಪಾವತಿಗೆ ಸಂಬಂಧಿಸಿದಂತೆ ಸಿಬಿಆರ್ ಸಂಖ್ಯೆ:000234/11-10-2021 ರಲ್ಲಿ ಸಿಬಿಆರ್ ಆಗಿದ್ದು ಆರ್‌ಐಜಿಎಸ್ ಸಂಖ್ಯೆ:000234/11-10-2021 ರಲ್ಲಿ ಆರ್‌ಐಜಿಎಸ್ ಜನರೇಟ್ ಆಗಿದ್ದು, ದೂರು ಬಂದ ಕಾರಣ ಈವರೆವಿಗೂ ಬಿಲ್ ಪಾವತಿಯಾಗಿರುವುದಿಲ್ಲ. ಸದರಿ ಕಾಮಗಾರಿಯ ಬಿಲ್ ಪಾಸು ಮಾಡಿರುವ ಹಾಗು ತಿದ್ದುಪಡಿಯಾಗಿ ಬಿಲ್ ಪಾವತಿಸಬೇಕಾಗಿರುವ ಮೊತ್ತದ ವಿವರಗಳು ಕೆಳಕಂಡಂತೆ ಇರುತ್ತದೆ.

3)

ಹಿಂದಿನ ಬಿಲ್ ಮೊತ್ತ		8430304.00
ಜಿಎಸ್‌ಟಿ ಶೇ 12		1011636.00
ಕೆಆರ್‌ಐಡಿಎಲ್ ಸೇವಾ ಶುಲ್ಕ ಶೇಕಡ 4.5 ರಂತೆ		379364.00
ಒಟ್ಟು ಮೊತ್ತ		**9821304.00**
ಟಿವಿಸಿಸಿಯ ಆಪಾದನೆ ಮೊತ್ತ	1959774.00	
ಗೌರವಾನ್ವಿತ ಲೋಕಾಯುಕ್ತರ ಆಪಾದನೆ ಮೊತ್ತ	247000.00	
ಒಟ್ಟು ಕಡಿತಗೊಳಿಸಬೇಕಾಗಿರುವ ಮೊತ್ತ	2206774.00	
ಪಾವತಿಸಬೇಕಾಗಿರುವ ಮೊತ್ತ		6223530.00
ಜಿಎಸ್‌ಟಿ ಶೇ 12		746824.00
ಕೆಆರ್‌ಐಡಿಎಲ್ ಸೇವಾ ಶುಲ್ಕ ಶೇಕಡ 4 ರಂತೆ		248941.00
ಒಟ್ಟು ಮೊತ್ತ		**7219295.00**

4) ಮೇಲ್ಕಂಡಂತೆ ಪಾವತಿಸಬೇಕಾಗಿರುವ ಅರ್ಹ ಮೊತ್ತಕ್ಕೆ ಶಾಸನೀಯ ಕಟಾವಣೆಗಳು ಹಾಗು ಐಎಫ್‌ಎಂಎಸ್ ತಂತ್ರಾಂಶದಲ್ಲಿ ಸರಿಪಡಿಸಿ ಪಾವತಿಸಬೇಕಾಗಿರುವ ನಿವ್ವಳ ಮೊತ್ತದ ವಿವರಗಳು ಕೆಳಕಂಡಂತೆ ಇರುತ್ತದೆ.

ವಿಷಯ :

ಪುಟದ ಸಂಖ್ಯೆ ..... (2)

ಕಡತದ ಸಂಖ್ಯೆ .....

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

3)

ಬಿಲ್ ಮೊತ್ತದ ವಿವರಗಳು	ಐಎಫ್ಎಂಎಸ್ ತಂತ್ರಾಂಶದಂತೆ ದಾಖಲಾಗಿರುವ ಮೊತ್ತ	ಸರಿಪಡಿಸಿ ಪಾವತಿಸಬೇಕಾಗಿರುವ ಮೊತ್ತ
ಬಿಲ್‌ನ ಗ್ರಾಸ್ ಮೊತ್ತ	8430304.00	6223530.00
ಜಿಎಸ್‌ಟಿ ಶೇ 12	1011636.00	746824.00
ಕೆಆರ್‌ಐಡಿಎಲ್ ಸೇವಾ ಶುಲ್ಕ	379364.00	248941.00
ಒಟ್ಟು ಮೊತ್ತ	**9821304.00**	**7219295.00**
ಆದಾಯ ತೆರಿಗೆ	196426.00	129449.00
ಕಾರ್ಮಿಕ ಕಲ್ಯಾಣ ನಿಧಿ	98213.00	64725.00
ಭದ್ರತಾ ಠೇವಣಿ	491065.00	323624.00
ರಾಜಧನ	49518.00	77788.00
ಸಿಬಿಎಫ್	9821.00	6472.00
ಸಿಜಿಎಸ್‌ಟಿ	87690.00	64725.00
ಎಸ್‌ಜಿಎಸ್‌ಟಿ	87690.00	64725.00
ಆಡಿವ್ ರಿಕವರಿ	0.00	248941.00
ಒಟ್ಟು ಶಾಸನೀಯ ಕಡಿತಗಳು	**1020423.00**	**980449.00**
ನಿವ್ವಳ ಮೊತ್ತ	**8800881.00**	**6238846.00**

4) ಮೇಲ್ಕಂಡ ಕಾಮಗಾರಿಯ ಮೊದಲನೇ ಅಂತಿಮ ಬಿಲ್‌ನ ಒಟ್ಟು ಮೊತ್ತ ರೂ.7219295/- ಗಳ ಪೈಕಿ ಶಾಸನೀಯ ಕಟಾವಣೆಗಳು ರೂ.980449/- ಗಳನ್ನು ಹೊರತುಪಡಿಸಿ ನಿವ್ವಳ ಮೊತ್ತ ರೂ.6238846/-ಗಳನ್ನು ಗುತ್ತಿಗೆದಾರರಿಗೆ ಪಾವತಿಸುವಂತೆ ಮುಖ್ಯಲೆಕ್ಕಾಧಿಕಾರಿಗಳನ್ನು ಕೋರಲು ಆದೇಶಕ್ಕೆ ಸಲ್ಲಿಸಿದೆ.

02/06/2025

5) ಕಾಅ(ದಾಹಳ್ಳಿ))

ಕಂಡಿಕೆ (4) ರಲ್ಲಿ ತಿಳಿಸಿರುವಂತೆ ರೂ. ಕಂಡಿಕೆ (5) ರಲ್ಲಿ ಕೋರಿರುವಂತೆ ಗುತ್ತಿಗೆದಾರರಿಗೆ ಬಿಲ್ಲು ಪಾವತಿಸುವ ಬಗ್ಗೆ ಪರಿಶೀಲಿಸಿ ಸಲ್ಲಿಸಿದೆ

02/06/2025

EXECUTIVE ENGINEER
Bruhat Bangalore Mahanagara Palike
Dasarahalli Division, Bangalore - 560 057.

6) ಮೇಲ್ಕಂಡ ಕೋರಿಕೆ ಕುರಿತು

6/6

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಾಸರಹಳ್ಳಿ ವಿಭಾಗ
ದಿನಾಂಕ : 6/6/25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ (3)

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
	~~ಕಂಡಿಕೆ (7) ರಲ್ಲಿನ ಆದೇಶದನ್ವಯ ಹಾಗೂ ಕಾರ್ಯಪಾಲಕ~~
(8)	ಅಭೀಯಂತರರು, ದಾಸರಹಳ್ಳಿ ವಿಭಾಗ, ದಾಸರಹಳ್ಳಿ ವಲಯ ಕಛೇರಿಯವರು ಸಲ್ಲಿಸಿರುವ **ಕಡತವನ್ನು IFMS ಟಾಸ್ಕ್ ಹಾಗೂ Gok-Other ಕ್ಯಾಟಗರಿ** ಅಡಿಯಲ್ಲಿ ಮಾನ್ಯ ಮುಖ್ಯ ಆಯುಕ್ತರು ರವರು ಪಾವತಿಗೆ ಅನುಮೋದಿಸಿರುವ ಬಗ್ಗೆ ಪರಿಶೀಲಿಸಲಾಯಿತು.
(9)	ಇ ಆಫಿಸ್ **7771** ರ ಕಡತದ **Note # 59** ರ ವರದಿಯಲ್ಲಿ **Gok-Others** ಕ್ಯಾಟಗರಿ ಅಡಿಯಲ್ಲಿ ನಿರ್ವಹಿಸಿ ಪಾವತಿಯ ಕಾಮಗಾರಿಗಳ ಜಾಬ್ ಸಂಕೇತ ಹಾಗೂ ಸಿಬಿರ್ ಅನ್ವಯ ಪರಿಶೀಲಿಸಲಾಗಿದ್ದು, ಜಾಬ್ ಸಂಕೇತ: 015-19-000009 CBR 20-002436 / 02-Jul-2019 ಕಡತದ ಪುಟ ಸಂಖ್ಯೆ: 25 ರ ಕ್ರಮ ಸಂಖ್ಯೆ: (1) ಕ್ಕೆ ರೂ. 9821304.00 ಗಳಿಗೆ ಮಾನ್ಯ ಮುಖ್ಯ ಆಯುಕ್ತರು ರವರು Note # 64 ರಲ್ಲಿ ದಿನಾಂಕ: 11.112021 ರಲ್ಲಿ ಅನುಮೋದಿಸಿರುತ್ತಾರೆ. (ಟಿಪ್ಪಣಿ ಪ್ರತಿಗಳನ್ನು ಕಡತದ ಬಲ ಭಾಗದಲ್ಲಿ ಲಗತ್ತಿಸಿದೆ)
(10)	ಪರಿಶೀಲಿಸಲಾಗಿ, IFMS ತಂತ್ರಾಂಶದಲ್ಲಿ RTGS Generate ಆಗಿದ್ದು, UTR No ಆಗದೇ ಗುತ್ತಿಗೆದಾರರಿಗೆ ಕಾಮಗಾರಿಯ ಬಿಲ್ಲು ಪಾವತಿಯಾಗದೇ ಇರುವುದನ್ನು ತಮ್ಮ ಅವಗಾಹನೆಗೆ ಸಲ್ಲಿಸುತ್ತಾ, ಜಾಬ್ ಸಂಕೇತ: 015-19-000009 CBR 20-002436 / 02-Jul-2019 ಅನ್ನು ತಾವು ಒಪ್ಪಿದಲ್ಲಿ IFMS ತಂತ್ರಾಂಶದಲ್ಲಿ RePUSh ಮಾಡಲು ಅನುವಾಗುವಂತೆ M/s Vallabh Software Solutions ರವರಿಗೆ ತಿಳಿಸಬಹುದಾಗಿದ್ದು, ಮುಂದಿನ ತಮ್ಮ ಆದೇಶಕ್ಕಾಗಿ ಸಲ್ಲಿಸಿದೆ. ಲೆಕ್ಕ ಅಧೀಕ್ಷಕ 16/06/2022
(11)	ಮುಖ್ಯ ಲೆಕ್ಕಾಧಿಕಾರಿಗಳು) ಯಥಾವತ್ ಸಲ್ಲಿಸಿ 17/6
12)	IFMS)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ .....

..... ಪುಟದ ಸಂಖ್ಯೆ — 1 —

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಸ್‌ಎಫ್‌ಸಿ ಅನುದಾನದ 30.00 ಕೋಟಿಗಳ ಮೊತ್ತದ ಕಾಮಗಾರಿಗೆ ಸಂಬಂಧಿಸಿದಂತೆ ತನಿಖೆ ನಡೆಸುವ ಬಗ್ಗೆ.

ಉಲ್ಲೇಖ 1. ಶ್ರೀ. ಬಿ.ವಿ. ಸದಾನಂದಗೌಡ ಕೇಂದ್ರ ರಾಸಾಯನಿಕ ಮತ್ತು ರಸ ಗೊಬ್ಬರ ಸಚಿವರು ರವರ ಪತ್ರದ ಸಂಖ್ಯೆ: ರಾ.ರ.ಗೊ.ಸ/ಬೆಂಕ/458/2019, ದಿನಾಂಕ: 11.07.2019.

2. ಕಾರ್ಯಪಾಲಕ ಅಭಿಯಂತರರು (ದಾಪ)/ಪಿಆರ್/ / 2018–19 ದಿ. 09.2019

• • • • •

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಶ್ರೀ. ಬಿ.ವಿ.ಸದಾನಂದಗೌಡ ಕೇಂದ್ರ ರಾಸಾಯನಿಕ ಮತ್ತು ರಸ ಗೊಬ್ಬರ ಸಚಿವರು ಹಾಗೂ ಪಾಲಿಕೆ ವಿರೋಧದ ನಾಯಕರಾದ ಶ್ರೀ.ಪದ್ಮನಾಭ ರೆಡ್ಡಿ ರವರು ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ SFC ಅನುದಾನದಡಿಯಲ್ಲಿ ರೂ. 30.00 ಕೋಟಿಗಳ ಮೊತ್ತದ ಕಾಮಗಾರಿಯಲ್ಲಿ ನಡೆದಿರುವ ಅವ್ಯವಹಾರ ಬಗ್ಗೆ ತನಿಖೆ ನಡೆಸಿ ವರದಿ ನೀಡಲು ತಿಳಿಸಿ ಪತ್ರ ಬರೆದಿದ್ದು, ಆದರಂತೆ ಮಾನ್ಯ ಆಯುಕ್ತರು 2017–18ನೇ ಸಾಲಿನಲ್ಲಿ SFC ಅನುದಾನದಡಿಯಲ್ಲಿ ರೂ. 30.00 ಕೋಟಿಗಳ ಮೊತ್ತದಲ್ಲಿ ಕೈಗೊಂಡಿರುವ ಕಾಮಗಾರಿಗಳನ್ನು ಪರಿಶೀಲನೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುವುದರಿಂದ ಈ ಸಂಬಂಧ ಉಲ್ಲೇಖ (1) ರ ದೂರಿನನ್ವಯ ಉಲ್ಲೇಖ (02) ರಂತೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ವಿಭಾಗದವರು ಸಲ್ಲಿಸಿರುವ ಕಾಮಗಾರಿಗಳ ಕಡತಗಳು ಹಾಗೂ ಅಳತೆ ಪುಸ್ತಕಗಳಿಗೆ ಸಂಬಂಧಪಟ್ಟಂತೆ ಸ್ಥಳ ಪರಿಶೀಲನೆ ಮಾಡಿ 3 ದಿನಗಳೊಳಗಾಗಿ ವರದಿ ಸಲ್ಲಿಸಲು ಕಾರ್ಯಪಾಲಕ ಅಭಿಯಂತರರು ರವರುಗಳಿಗೆ ಹಂಚಿಕೆ ಮಾಡಲಾಗಿರುವ ಆಂತರಿಕ ಕಛೇರಿ ಟಿಪ್ಪಣಿಯನ್ನು ತಯಾರಿಸಿ ತಮ್ಮ ಸಹಿಗಾಗಿ ಕಡತವನ್ನು ಸಲ್ಲಿಸಲಾಗಿದೆ.

1) ಕಾರ್ಯಪಾಲಕ ಅಭಿಯಂತರರು 25/1/2019
(ತಾಂತ್ರಿಕ ಮತ್ತು ಜಾಗೃತ ಕೋಶ)

2) ಅಧೀಕ್ಷಕ ಅಭಿಯಂತರರು
(ತಾಂತ್ರಿಕ ಮತ್ತು ಜಾಗೃತ ಕೋಶ)

ಕಂಡಿಕೆ (1)ರಲ್ಲಿನ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)ರವರ ವರದಿಯನ್ನು ಅವಗಾಹನೆಗೆ ತರುತ್ತಾ, ಕಛೇರಿ ಆದೇಶವನ್ನು ತಮ್ಮ ಸಹಿಗಾಗಿ ಸಲ್ಲಿಸಿದೆ.

ಅಧೀಕ್ಷಕ ಅಭಿಯಂತರರು 25/1/19
(ತಾಂತ್ರಿಕ ಮತ್ತು ಜಾಗೃತ ಕೋಶ)

3) ಮುಖ್ಯ ಅಭಿಯಂತರರು
(ಜಾ ಮತ್ತು ಪಿಪಿಇಡಿ)

ಒಪ್ಪಿಗೆ ಇದೆ. 25/1/19

ಮುಖ್ಯ ಅಭಿಯಂತರರು
(ಜಾಗೃತ ಮತ್ತು ಪಿ.ಪಿ.ಇ.ಡಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ದಾಸರಹಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದೆ. ಪುಟದ ಸಂಖ್ಯೆ — 1 —

ಎಸ್.ಎಫ್.ಸಿ ಅನುದಾನದ 30.00 ಕೋಟಿಗಳ ಮೊತ್ತದ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಒದಗಿಸುವ ಬಗ್ಗೆ. ಕಡತದ ಸಂಖ್ಯೆ CE/VE&PPED/ಮು/2019-20/17

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ವಿಷಯ:- ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಸ್.ಎಫ್.ಸಿ ಅನುದಾನದ 30.00 ಕೋಟಿಗಳ ಮೊತ್ತದ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಈ ಕಛೇರಿಗೆ ಒದಗಿಸುವ ಬಗ್ಗೆ.

ಉಲ್ಲೇಖ: 1. ಶ್ರೀ.ಸದಾನಂದ ಗೌಡ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವರು ರವರ ಪತ್ರದ ಸಂಖ್ಯೆ:ರಾ.ರ.ಗೊ.ಸ/ಬೆಂಕ/458/2019 ದಿನಾಂಕ:11-07-2019.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, ಬಿಬಿಎಂಪಿ ವತಿಯಿಂದ ನಡೆದಿರುವ ಎಸ್.ಎಫ್.ಸಿ ಅನುದಾನದ 30 ಕೋಟಿಗಳ ಮೊತ್ತದ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದೆ ಎಂದು ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರದ ಸಾರ್ವಜನಿಕರು ಸಲ್ಲಿಸಿರುವ ದೂರಿನನ್ವಯ ಸದರಿ ಕಾಮಗಾರಿಗಳ ಪರಿಶೀಲನೆಗೆ ಉನ್ನತ ಅಧಿಕಾರಿಗಳನ್ನು ನೇಮಿಸಿ ತನಿಖೆ ನಡೆಸಿ ಸಂಬಂಧಿಸಿದ ಅಧಿಕಾರಿಗಳ ಮೇಲೆ ಕ್ರಮ ಜರುಗಿಸುವಂತೆ ಉಲ್ಲೇಖ (01)ರಂತೆ ಮಾನ್ಯ ಆಯುಕ್ತರನ್ನು ಕೋರಿದ್ದು, ಈ ಸಂಬಂಧ ಮಾನ್ಯ ಆಯುಕ್ತರು ಉಲ್ಲೇಖ (01)ರ ಮುಖ ಪುಟದ ಮೇಲೆ "Please get and Enquiry done immeidatly and till the enquiry is completed no payment be released" ಎಂದು ಆದೇಶಿಸಿರುತ್ತಾರೆ. 1)

ಈ ಹಿನ್ನೆಲೆಯಲ್ಲಿ ದಾಸರಹಳ್ಳಿ ವಿಭಾಗದ ವ್ಯಾಪ್ತಿಯಲ್ಲಿ ಎಸ್.ಎಫ್.ಸಿ ಅನುದಾನದಲ್ಲಿ ರೂ.30.00 ಕೋಟಿಗಳ ಮೊತ್ತಕ್ಕೆ ಸಂಬಂಧಿಸಿದ ಎಲ್ಲಾ ಕಾಮಗಾರಿಗಳ ಮೂಲ ಕಡತಗಳು, ಟೆಂಡರ್ ಪ್ರಕ್ರಿಯೆಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು, ಬಿ.ಆರ್.ವಹಿ, ಅಳತೆ ಪುಸ್ತಕಗಳು ಹಾಗೂ ಇತರೆ ಅವಶ್ಯ ದಾಖಲಾತಿಗಳನ್ನು 7 ದಿನಗಳ ಈ ಕಛೇರಿಗೆ ಕಳುಹಿಸಲು ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರಿಗೆ ಸೂಚಿಸಲು ಆಂತರಿಕ ಕಛೇರಿ ಟಿಪ್ಪಣಿ ತಯಾರಿಸಿ ವಿಶೇಷ ಆಯುಕ್ತರು (ಯೋಜನೆ)ರವರ ಅನುಮೋದನಾ ಸಹಿಗಾಗಿ ಸಲ್ಲಿಸಿದೆ. 2)

ಕಾರ್ಯಪಾಲಕ ಅಭಿಯಂತರರು 08/20/19
(ತಾಂತ್ರಿಕ ಮತ್ತು ಜಾಗೃತ ಕೋಶ)

ಮುಖ್ಯ ಅಭಿಯಂತರರು (ಜಾ ಮತ್ತು ಪಿಪಿಇಡಿ) 3)

ಕಂಡಿಕೆ (1) ರಿಂದ (2)ರವರೆಗಿನ ವರದಿಯನ್ನು ಅವಗಾಹನೆಗಾಗಿ ಸಲ್ಲಿಸಿದೆ ಹಾಗೂ ಕಂಡಿಕೆ (2)ರಲ್ಲಿ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)ರವರು ವರದಿಸಿರುವಂತೆ ಆಂತರಿಕ ಕಛೇರಿ ಟಿಪ್ಪಣಿ ತಯಾರಿಸಿ ಸಲ್ಲಿಸಲಾಗಿದ್ದು, ಅನುಮೋದನಾ ಸಹಿಗಾಗಿ ಕಡತವನ್ನು ಮಂಡಿಸಿದೆ. 4)

ಮುಖ್ಯ ಅಭಿಯಂತರರು 7/8/19
(ಜಾ ಮತ್ತು ಪಿಪಿಇಡಿ)

Special Commissioner (Project)
Brihat Bangalore Mahanagara Palike

ವಿಶೇಷ ಆಯುಕ್ತರು (ಯೋಜನೆ) 5)

CE(VE&PPED)
ಕಾ.ಅ(ಜಾ ಪಿ.ಪಿ.ಪಿ.ಇ.ಡಿ) ರವರ ಕಛೇರಿ
ಬೃ.ಬೆಂ.ಮ.ಪಾ
ದಿನಾಂಕ: 12/08/2019

ಬೃ.ಬೆಂ.ಮ.ಪಾ./ಮು.ಅ.ಮ./ಕ.ಎ/1304
ದಿನಾಂಕ 07-8-19
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಅಭಿಯಂತರರು
(ಜಾಗೃತ ಮತ್ತು ಪಿ.ಪಿ.ಇ.ಡಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪು.ತಿ.ನೋ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ: ಅನುದಾನದ ವಿವರಗಳನ್ನು ಪುಟದ ಸಂಖ್ಯೆ -82-

ಕಾಮಗಾರಿಗಳಿಗೆ ಕಲಬುರ್ಗಿಸಿವಂತೆ ತನಿಖೆ ನಡೆಸುವ ಬಗ್ಗೆ. ಕಡತದ ಸಂಖ್ಯೆ SE/HVCC/GL/167/2024-25

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
244	ಹಿಂದಿನ ಕಂಡಿಕೆಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಕಂಡಿಕೆ (241) ರಲ್ಲಿ ಮಾನ್ಯ ಮುಖ್ಯ ಆಯುಕ್ತರು ರವರು ಕೆಲವೊಂದು ಸ್ಪಷ್ಟೀಕರಣ ನೀಡಲು ಸೂಚಿಸಿರುತ್ತಾರೆ. ಅದರಂತೆ ಈ ಕೆಳಗಿನಂತೆ ಸ್ಪಷ್ಟೀಕರಣವನ್ನು ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಿದೆ.
245	ಮುಖ್ಯ ಅಭಿಯಂತರರು (ಟಿವಿಸಿಸಿ) ರವರ ಕಂಡಿಕೆ (51) ರಲ್ಲಿ ತಿಳಿಸಿರುವ ಆಕ್ಷೇಪಣೆಗಳಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು ತಮ್ಮ ಅನುಪಾಲನಾ ವರದಿಯನ್ನು ಒಳಗೊಂಡಂತೆ ನೀಡಿರುವ ವಿಷಯವನ್ನು ಅವಗಾಹನೆಗೆ ಸಲ್ಲಿಸಿದೆ.
246	ಮುಂದುವರೆದು, ಟಿವಿಸಿಸಿ ವರದಿಯ ದಿನಾಂಕ:16.05.2023 ರ ಆಕ್ಷೇಪಣೆಗಳಿಗೆ ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ರವರು ವಿಸ್ತೃತವಾದ ಅನುಪಾಲನಾ ವರದಿಯನ್ನು ದಾಖಲೆಗಳೊಂದಿಗೆ ಸಲ್ಲಿಸಿರುತ್ತಾರೆ. ಸದರಿ ಸಲ್ಲಿಸಿರುವ ಅನುಪಾಲನಾ ವರದಿಯನ್ನು ಪರಿಗಣಿಸಬಹುದಾಗಿರುತ್ತದೆ.
247	ಈ ಮೇಲಿನ ವರದಿಯನ್ನು ಅವಗಾಹನೆಗೆ ತರುತ್ತಾ, ಸದರಿ 19 ಕಾಮಗಾರಿಗಳ ಸಂಬಂಧ ಕಂಡಿಕೆ (216) ರಿಂದ (217) ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರ ಅನುಪಾಲನಾ ವರದಿಯನ್ನು ತಮ್ಮ ಅವಗಾಹನೆಗೆ ತರುತ್ತಾ, ಈ ಹಿಂದೆ ಟಿವಿಸಿಸಿ ಕಛೇರಿಯ ವರದಿಯಂತೆ ಪ್ರಸ್ತುತ ಕಾಮಗಾರಿಗಳ ಬಿಲ್ಲುಗಳ ಮೊತ್ತ ಪಾವತಿಯಾಗದೇ ಇರುವುದರಿಂದ ವಾಸ್ತವಿಕವಾಗಿ ಅನುಷ್ಠಾನದಲ್ಲಿಯ ಅಳತೆಗಳನ್ನು ಪರಿಗಣಿಸದೇ ವಾಸ್ತವಿಕ ಅನುಷ್ಠಾನಕ್ಕಿಂತ ಹೆಚ್ಚುವರಿಯಾಗಿ ಪರಿಗಣಿಸಲಾಗಿರುವ ಅಥವಾ ಇ-ಎಂ.ಬಿಯಲ್ಲಿ ಹೆಚ್ಚುವರಿಯಾಗಿ ನಮೂದಿಸಿರುವ ಮೊತ್ತವನ್ನು ಕಡಿತ ಮಾಡಲು ಪರಿಶೀಲಿಸಿರುವುದು ಈ ಕೆಳಕಂಡಂತಿರುತ್ತದೆ.

ಟಿವಿಸಿಸಿ ವರದಿಯಂತೆ ಕಡಿತಗೊಳಿಸಿರುವ ಮೊತ್ತ

Sl.No.	Job Code	Deduction Amount
1	012-19-000045	13,46,797.97
2	012-19-000046	1,82,168.40
3	012-19-000047	5,01,475.92
4	012-19-000048	5,89,177.91
5	013-19-000079	10,72,190.50
6	039-19-000011	12,47,416.69
7	039-19-000012	8,43,508.44
8	014-19-000055	3,66,907.00
9	014-19-000057	22,49,184.00
10	014-19-000054	30,24,300.00
11	014-19-000058	23,54,117.40
12	014-19-000056	23,71,596.00
13	014-19-000053	31,07,568.00

ವಿಷಯ : Dasanahalli

ಪುಟದ ಸಂಖ್ಯೆ ..... -83-

ಕಡತದ ಸಂಖ್ಯೆ CE/TVCC/GL/14/23-24

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

14	015-19-000009	19,58,853.00
15	015-19-000008	41,89,504.00
16	071-19-000034	5,03,892.00
17	071-19-000035	4,35,551.00
18	071-19-000036	8,46,997.00
19	071-19-000037	1,88,017.00
	Total Deduction Amount =	2,93,79,222.23

248 ಮೇಲೆ ವಿವರಿಸಿರುವಂತೆ ಒಟ್ಟು 19 ಕಾಮಗಾರಿಗಳಿಗೆ ಜಾಬ್ ಸಂಖ್ಯೆ ವಾರು ಟಿವಿಸಿಸಿ ವರದಿಯಂತೆ ಸದರಿ ಬಿಲ್ಲುಗಳನ್ನು ಮೊದಲನೇ ಮತ್ತು ಅಂತಿಮ ಬಿಲ್ಲೆಂದು ಪರಿಗಣಿಸಿ ಕಂಡಿಕೆ (51) ರಲ್ಲಿ ತಿಳಿಸಿರುವ ಆಕ್ಷೇಪಣೆಯ ಮೊತ್ತವಾದ ರೂ. 2,80,27,099/- ಗಳನ್ನು ನಮೂದಾಗಿದ್ದು, ಇದು ತಪ್ಪು ಲೆಕ್ಕಚಾರದಿಂದಾಗಿದ್ದು, ಪ್ರಸ್ತುತ ಜಾಬ್ ಕೋಡ್‌ವಾರು ಕಡಿತ ಮಾಡಲು ಲೆಕ್ಕ ಮಾಡಿರುವ ಮೊತ್ತ ರೂ.2,93,79,222.23/- ಗಳಾಗಿದ್ದು, ಸದರಿ ಮೊತ್ತವನ್ನು ಕಟಾವು ಮಾಡಿ ಕೆ.ಆರ್.ಐ.ಡಿ.ಎಲ್ Charges ಮತ್ತು GST ಹಾಗೂ ಇನ್ನಿತರೆ ಶಾಸನಬದ್ಧ ಕಟಾವುಗಳನ್ನು ಮಾಡುವ ಷರತ್ತಿಗೊಳಪಡಿಸಿ ಉಳಿಕೆ ಮೊತ್ತವನ್ನು ಪಾವತಿಸಲು ಅಭಿಪ್ರಾಯಿಸಿ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)

ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ)

ಅಧೀಕ್ಷಕ ಅಭಿಯಂತರರು (ಟಿವಿಸಿಸಿ)

249 ಕಂಡಿಕೆ (244) ರಿಂದ (248) ರವರೆಗಿನ ವರದಿಯನ್ನು ಅವಗಾಹನೆಗೆ ತರುತ್ತಾ, ಕಂಡಿಕೆ (248) ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು (ಟಿವಿಸಿಸಿ) ರವರು ವರದಿಸಿರುವಂತೆ, ಒಟ್ಟು 19 ಕಾಮಗಾರಿಗಳಿಗೆ ಜಾಬ್ ಸಂಖ್ಯೆ ವಾರು ಟಿವಿಸಿಸಿ ವರದಿಯಂತೆ ಸದರಿ ಬಿಲ್ಲುಗಳನ್ನು ಅಂತಿಮ ಬಿಲ್ಲುಗಳೆಂದು ಪರಿಗಣಿಸಿ ಕಂಡಿಕೆ (51) ರಲ್ಲಿ ತಿಳಿಸಿರುವ ಆಕ್ಷೇಪಣೆಯ ಮೊತ್ತವಾದ ರೂ. 2,80,27,099/- ಗಳನ್ನು ನಮೂದಾಗಿದ್ದು, ಇದು ತಪ್ಪು ಲೆಕ್ಕಚಾರದಿಂದಾಗಿದ್ದು, ಪ್ರಸ್ತುತ ಜಾಬ್ ಕೋಡ್‌ವಾರು ಕಡಿತ ಮಾಡಲು ಲೆಕ್ಕ ಮಾಡಿರುವ ಮೊತ್ತ ರೂ.2,93,79,222.23/- ಗಳಾಗಿದ್ದು, ಸದರಿ ಮೊತ್ತವನ್ನು ಕಟಾವು ಮಾಡಿ ಕೆ.ಆರ್.ಐ.ಡಿ.ಎಲ್ Charges ಮತ್ತು GST ಹಾಗೂ ಇನ್ನಿತರೆ ಶಾಸನಬದ್ಧ ಕಟಾವುಗಳನ್ನು ಮಾಡುವ ಷರತ್ತಿಗೊಳಪಡಿಸಿ ಉಳಿಕೆ ಮೊತ್ತವನ್ನು ಪಾವತಿಸಲು ಅಭಿಪ್ರಾಯಿಸಿ ಮಾನ್ಯ ಮುಖ್ಯ ಆಯುಕ್ತರು ರವರ ಅನುಮೋದನೆಗಾಗಿ ಸಲ್ಲಿಸಿದೆ.

ಅಧೀಕ್ಷಕ ಅಭಿಯಂತರರು (ಟಿವಿಸಿಸಿ) 28/10/2024

ಮುಖ್ಯ ಅಭಿಯಂತರರು (ಟಿವಿಸಿಸಿ)

ದಿನಾಂಕ 23/10/24

25 ಮಾನ್ಯ ಮುಖ್ಯ ಆಯುಕ್ತರು] Spl Comm (project) is requested to give his views without reporting to anyone else.

29.10.24

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

Dasarahalli

ಪುಟದ ಸಂಖ್ಯೆ 84

ಕಡತದ ಸಂಖ್ಯೆ CE/TVCC/GL/14/23-24

ಟಿಪ್ಪಣಿಗಳು ಮತ್ತು ಆಜ್ಞೆಗಳು

ಆಯುಕ್ತರು ದಿನಾಂಕ 29/01/24 590

51) ಎ. ಪರಿಶೀಲಿಸಲಾಗಿದೆ The recommendation of CE TVCC in Note 249 may be accepted for the following reasons:

(A) The compliance submitted by EE Dasarahalli in Notes 216 – 217, for the queries raised by the CE TVCC in Note 51 has been accepted by the CE TVCC in Note 249.

(B) Note 248 clearly mentions the amount that should be deducted and the statutory deductions & KRIDL (also) deductions.

(C) The report of CE TVCC wrt 10 of the 19 works has been accepted by the Lok Ayukta (the report enclosed dt: 31-01-2024).

(D) Since the works are executed by KRIDL, the restrictions on payment to the KRIDL may be verified as per existing norms.

(E) Since it is proven that deductions are absolutely necessary, disciplinary enquiry may be initiated (PTO)

ಪು.ತಿ.ನೋ

ವಿಷಯ : ರೂ. 30.00 ಕೋಟಿಗಳ ಮೊತ್ತದ ಕಾಮಗಾರಿಗಳಿಗೆ ಸಂಬಂಧಪಟ್ಟಿದಂತೆ, ಎಸ್.ವಿಪ್.ವಿ. ಅನುದಾನದ ಸಂಬಂಧಪಟ್ಟಿದಂತೆ ತನಿಖೆ ನಡೆಸುವ ಬಗ್ಗೆ

ಪ್ರಸ್ತುತ ಸಂಖ್ಯೆ -85-

ಕಡತದ ಸಂಖ್ಯೆ SC(P)|PR|590|2

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

against all officers who have recorded wrong M and raised false bills.

The above is put up for your kind consideration.

06.2.25

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪ

52) Chief Commissioner: Agreed.

11.2.25

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿ. ವಿಶೇಷ ಆಯುಕ್ತರು (ಹಣಕಾಸು) ರವರ ಕಛೇರಿ
ಸಂಖ್ಯೆ: ವಿ.ಆ.(ಹ)/ 683
ದಿನಾಂಕ: 12/02/25
ವಿಶೇಷ ಆಯುಕ್ತರು (ಹಣಕಾಸು) ರವರ ಕಛೇರಿ
ಸ್ವೀಕೃತ ಸಂಖ್ಯೆ: 743
ದಿನಾಂಕ: 12/02/25

53) ವಿ. ವಿಶೇಷ ಆಯುಕ್ತರು (ಹಣಕಾಸು)
ಕ್ರಮ, ಕೈಗೊ

12/2/25

Special Commissioner (Finance)
BRUHAT BENGALURU MAHANAGARA PALIKE

54) [illegible]

ಕಂಡಿಕೆ 251 (E) ರಂತೆ
ಮುಂದಿನ ಕ್ರಮಾನುಕರಣೆಗಾಗಿ ಕಡತವನ್ನು
ವಿಶೇಷ ಆಯುಕ್ತರು (ಆಡಳಿತ) ರವರಿಗೆ
ಸಲ್ಲಿಸಿದೆ ಬಹುದು. ಅವಲೋಕನಾರ್ಥ.

17/2/25.

55) ವಿ. ಆಯುಕ್ತರು (ಆ)
ಕ್ರಮ ಕೈಗೊ

20/2/25

ವಿ. ವಿಶೇಷ ಆಯುಕ್ತರು (ಆಡಳಿತ) ರವರ ಕಛೇರಿ
ಸಂಖ್ಯೆ: ವಿ.ಆ.(ಆ)/ 8
ದಿನಾಂಕ: 17/02/25
ವಿಶೇಷ ಆಯುಕ್ತರು (ಆಡಳಿತ) ರವರ ಕಛೇರಿ
ಸ್ವೀಕೃತ ಸಂಖ್ಯೆ: 684
ದಿನಾಂಕ: 21/02/2025

256) ವಿಶೇಷ ಆಯುಕ್ತರು (ಆಡಳಿತ) Kindly prepare a file with a copy of all (PTO)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಟಿಪ್ಪಣಿ ಹಾಳೆ

ಪುಟದ ಸಂಖ್ಯೆ -86-

ಕಡತದ ಸಂಖ್ಯೆ S.C[F] PR/DE/24-25

1590 ವಿಷಯ

ಕಂಡಿಕೆ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

necessary documents taken from this file, to initiate DE against the concerned. The current file may then be returned to Finance (Section) for further action.

12.3.25
ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

257) DC (Adm) 12/3 (ಜಾಲಿಕೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

AC-1) 13/3
ಸಹಾಯಕ ಆಯುಕ್ತರು (ಆಡಳಿತ-1)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಡಿ.ಆರ್. ಸಂಖ್ಯೆ: 923
ದಿನಾಂಕ: 13/03/2025

3865 12/03/25

258) ನೋಟು # 257 ರಲ್ಲಿ ಮಾನ್ಯ ಮುಖ್ಯ ಆಯುಕ್ತರು ರವರು ತಿಳಿಸಿರುವಂತೆ ಈಗಾಗಲೇ ನೋಟು 257 ರಲ್ಲಿ ಮಾನ್ಯ ವಿಶೇಷ ಆಯುಕ್ತರು (ಆ) ನಿರ್ದೇಶಿಸಿರುವಂತೆ ಮುಂದಿನ ಕ್ರಮಕ್ಕಾಗಿ ಮೂಲ ಕಡತವನ್ನು CAO ರವರಿಗೆ ಕಳುಹಿಸಿಲಾಗಿದೆ ಎಂಬುದಾಗಿ ತಿಳಿಸಿ ಸಾರ್ವ ಹೊರಡಿಸಲಾಗಿದೆ.

259) ಮಾಹಿತಿಗಾಗಿ.
ಕಂಪಾಕೆ ರವರಿಗೆ ಈ ಕಡತವನ್ನು ಹಿಂದಿರುಗಿಸಲಾಗಿದೆ.

13.03.2025

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ತಾಂತ್ರಿಕ ಹಾಗೂ ಜಾಗೃತ ಕೋಶದ

–:ವರದಿ:–

ವಿಷಯ:– ದಾಸರಹಳ್ಳಿ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಸ್.ಎಫ್.ಸಿ ಅನುದಾನದ 30.00 ಕೋಟಿಗಳ ಮೊತ್ತದ ಕಾಮಗಾರಿಗಳಿಗೆ ಸಂಬಂಧಿಸಿದ ದಾಖಲಾತಿಗಳನ್ನು ಈ ಕಛೇರಿಗೆ ಒದಗಿಸುವ ಬಗ್ಗೆ.

ಉಲ್ಲೇಖ:– 1. ಶ್ರೀ.ಸದಾನಂದ ಗೌಡ, ಮಾನ್ಯ ರಸಾಯನಿಕ ಮತ್ತು ರಸಗೊಬ್ಬರ ಸಚಿವರು ಭಾರತ ಸರ್ಕಾರ ರವರ ಪತ್ರದ ಸಂಖ್ಯೆ:ಎ.ಎ.ಗೂ.ಸ/ಬೆಂಕ/458/2019 ದಿ:11–07–2019

2. ವಿಶೇಷ ಆಯುಕ್ತರು (ಯೋಜನೆ)ರವರ ಕಛೇರಿಯ ಆಂತರಿಕಕಛೇರಿ ಟಿಪ್ಪಣಿ ಸಂಖ್ಯೆ:ವಿ.ಆ.(ಯೋ)/ಪಿಆರ್/3837/2019–20 ದಿ:26–08–2019.

3 ಸರ್ಕಾರದ ಅಧೀನ ಕಾರ್ಯದರ್ಶಿ ನಗರಾಭಿವೃದ್ಧಿ ಇಲಾಖೆ (ಬಿಬಿಎಂಪಿ) ಪತ್ರದ ಸಂಖ್ಯೆ:ನಅಇ/109/ಎಂ.ಎನ್‌ವೈ/2019 ದಿನಾಂಕ:19–08–2019.

4 ವಿಶೇಷ ಆಯುಕ್ತರು (ಯೋಜನೆ)ರವರ ಕಛೇರಿಯ ನೆನಪೋಲೆ ಪತ್ರದ ಸಂಖ್ಯೆ:ವಿ.ಆ.(ಯೋ)/ಪಿಆರ್/4863/2019–20 ದಿ:30–09–2019.

5 ವಿಶೇಷ ಆಯುಕ್ತರು (ಯೋಜನೆ)ರವರ ಕಛೇರಿಯ ನೆನಪೋಲೆ–2 ರ ಪತ್ರದ ಸಂಖ್ಯೆ:ವಿ.ಆ.(ಯೋ)/ಪಿಆರ್/5916/2019–20 ದಿ:04–11–2019.

6 ಕಾರ್ಯಪಾಲಕ ಅಭಿಯಂತರರು (ದಾಸರಹಳ್ಳಿ) ಪ್ರಶ್ನಿತ ಕಾಮಗಾರಿಗೆ ಸಂಬಂಧಿಸಿದಂತೆ, ಕಡತಗಳನ್ನು ಈ ಕಛೇರಿಗೆ ಒದಗಿಸಲಾಗಿರುವ ದಿನಾಂಕ:21–09–2019.

		and surrounding in Bhuvaneshwarinagara at Bagalgunte in ward no-14 Dasarahalli sub division			
10	14	Construction of drain at Ganesha Subramanya Temple surrounding upto 1st cross Bhuvaneshwari ngara at Bagalgunte in ward no 14 Dasarahalli sub division	014-19-000054	170.00	1678527
11	14	Construction of drain at Panduranga Layout surroundings in Bhuvaneshwari nagara in ward no-14 Dasarahalli sub division	014-19-000058	165.00	1621633
12	14	Construction of drain at Shanimahatma Temple and Komala house surroundings in Bhuvaneshwari nagara in ward no-14 Dasarahalli sub division	014-19-000056	165.00	1621580
13	14	Construction of drain at Gangadareshwara temple Surroundings in Bhuvaneshwarinagar at Bagulugunte in ward no-14.	014-19-000053	170.00	1668934
14	15	Improvements to CC drain and covering slab at Coconut Garden roads and Krishne Gowda layout surroundings area in ward no-15 .	015-19-000009	100.00	9821304
15	15	Improvements CC drain and covering slabs at Kempegowda nagara and surroundings in ward no-15	015-19-000008	100.00	9825010
16	71	Construction of RCC drains at 1st, 2nd, 3rd cross roads and its surrounding cross of Gajananagara and 2nd main road and its surrounding road of Srigandhanagara in ward no 71, Hegganahalli. Sub Division.	071-19-000034	150.00	9810456- 4933092
17	71	Construction of RCC drains at 6th, 7th,8th Cross roads and its surrounding cross roads of Lakshmana nagara in ward No. 71, Hegganahalli.	071-19-000035	150.00	1472937
18	71	Improvements to roads and drains near Jamia Masjid and its Surrounding roads of Maruthinagara in ward No. 71 Hegganahalli.	071-19-000036	150.00	1473699
19	71	Construction of RCC drains at 5th, 6th and its surrounding cross roads of Sanjeevininagara 1st stage, Pataki godown road and its surrounding roads of Sanjeevininagara 2nd stage and Banashankari Bakery road and its surrounding roads of Sanjeevininagara 3rd stage in ward No. 71, Hegganahalli.	071-19-000037	150.00	1474283
Total				**3000.00**	

6. ಸದರಿ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯಲ್ಲಿನ ಐಟಂ ನಂ. 01ಕ್ಕೆ ಸಂಬಂಧಿಸಿದ Removing resetting of Footpath slab ಅಂಶವನ್ನು ನಿರ್ವಹಿಸಿರುವುದಾಗಿ ಹಾಜರಿದ್ದ ಅಭಿಯಂತರರು ಸ್ಥಳ ತಪಾಸಣಾ ಸಮಯದಲ್ಲಿ ತಿಳಿಸಿದ್ದು, ಆದರೆ ಸದರಿ ಅಂಶವನ್ನು ನಿರ್ವಹಿಸಿರುವ ಸಂಬಂಧ ಇ-ಅಳತೆ ಪುಸ್ತಕದಲ್ಲಿ ದಾಖಲಿಸಿರುವ ಅಳತೆಗಳ ಪ್ರಕಾರ ಗುರುತಿಸಿ ತೋರಿಸಲು ಸಾಧ್ಯವಾಗಿಲ್ಲದಿರುವುದು ಹಾಗೂ ಸದರಿ ಅಂಶವನ್ನು ನಿರ್ವಹಿಸಿರುವ ಸಂಬಂಧ ಕಾಮಗಾರಿ ಅನುಷ್ಠಾನದಲ್ಲಿನ ಪೂರ್ವದಲ್ಲಿ, ಸಂದರ್ಭದಲ್ಲಿ ಮತ್ತು ನಂತರದಲ್ಲಿನ ಛಾಯಾ ಚಿತ್ರಗಳು ಕಡತದಲ್ಲಿ ಲಭ್ಯವಿಲ್ಲದಿರುವುದನ್ನು ಪರಿಗಣಿಸಿದಲ್ಲಿ *ಸದರಿ ಅಂಶವನ್ನು ಕಾಮಗಾರಿಯ ಅನುಷ್ಠಾನದಲ್ಲಿ ನಿರ್ವಹಿಸದೆಯೇ ನಿರ್ವಹಿಸಲಾಗಿದೆ ಎಂದು ಇ-ಅಳತೆ ಪುಸ್ತಕದಲ್ಲಿ ದಾಖಲಿಸಿ ರೂ.72,093/- ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಪಾವತಿಗೆ ಸಲ್ಲಿಸಿರುವುದನ್ನು ಗಮನಿಸಬಹುದಾಗಿದೆ.*

ಮೇಲ್ಕಂಡ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಸದರಿ ಕಾಮಗಾರಿಯ ಚರಂಡಿ ಮತ್ತು ಅಡಿಗಾಲುವೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ದಾಖಲಿಸಿ ಗುತ್ತಿಗೆದಾರರಿಗೆ ಹಣ ಪಾವತಿಗೆ ಸಲ್ಲಿಸಿರುವ *ಚರಂಡಿ ಮತ್ತು ಅಡಿಗಾಲುವೆಗಳ ಅಂಶಗಳ ಪರಿಮಾಣಗಳಿಗೂ ಸ್ಥಳ ತಪಾಸಣೆಯಲ್ಲಿ ಕಂಡುಬಂದಂತಹ ಅಂಶಗಳ ಪರಿಮಾಣಗಳಿಗೂ ಒಂದಕ್ಕೊಂದು ತಾಳೆಯಾಗದೇ ವ್ಯತ್ಯಾಸವಿದ್ದರೂ ಸಹ ವಾಸ್ತವಿಕವಾಗಿ ಅನುಷ್ಠಾನಗೊಳಿಸಿದಂತಹ ಅಂಶಗಳ ಪರಿಮಾಣಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದೇ ಹೆಚ್ಚುವರಿ ಪರಿಮಾಣಗಳನ್ನು ದಾಖಲಿಸಿ ಒಟ್ಟಾರೆಯಾಗಿ ರೂ.31,07,568/-ಗಳ ಮೊತ್ತವನ್ನು ಹೆಚ್ಚುವರಿಯಾಗಿ ಪಾವತಿ ಮಾಡಿರುವುದು ಗಮನಿಸಲಾಗಿರುತ್ತದೆ.*

ಕ್ರಮ ಸಂಖ್ಯೆ: 14

ಕಾಮಗಾರಿಯ ಹೆಸರು: Improvements to CC drain and covering slab at Coconut Garden roads and Krishne Gowda layout surroundings area in ward no-15 .

A1ಕಾಮಗಾರಿ ಕಡತ ಪರಿಶೀಲನಾ ವರದಿ.

r. 2018-19ನೇ ಸಾಲಿನ State finance commission untied grant works ನ ಪಿ-ಕೋಡ್ ಪಿ3111 ರ ಅನುದಾನಕ್ಕೆ ಸಿದ್ದಪಡಿಸಿ ಪಟ್ಟಿಯಡಿಯಲ್ಲಿ ದಾಸರಹಳ್ಳಿ ವಾರ್ಡ್ ಸಂಖ್ಯೆ:15 ರ ಪರಿಮಿತಿಯಲ್ಲಿ ಬರುವ **coconut garden roads and Krishne Gowda layout** ಪ್ರದೇಶದಲ್ಲಿ ವಿವಿಧ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಮೇಲ್ಪ್ಪ ಒದಗಿಸುವುದು, ಆರ್.ಸಿ.ಸಿ ಚರಂಡಿ ಮತ್ತು ಅಡಿಗಾಲುವೆ ನಿರ್ಮಾಣಕ್ಕಾಗಿ ರೂ.100.00 ಲಕ್ಷಗಳ ಮೊತ್ತಕ್ಕೆ ಅಂದಾಜು ಪಟ್ಟಿಯನ್ನು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆಗಳ ಅನುಮೋದಿತ ದರಗಳಲ್ಲಿ ಸಿದ್ದಪಡಿಸಲಾಗಿದ್ದು, ಕರ್ನಾಟಕ ಸರ್ಕಾರದ ಆದೇಶ ಸಂ.ನಇ/225/ಎಸ್ಎಫ್ಸಿ/2018 ದಿನಾಂಕ:07-01-2019 ರಂತೆ ಸದರಿ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಆಯುಕ್ತರು ಬಿಬಿಎಂಪಿ/ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಕಾಮಗಾರಿಗಳನ್ನು ಕರ್ನಾಟಕ ರಸ್ತೆ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತದ ಮೂಲಕ ಅನುಷ್ಠಾನಗೊಳಿಸ ತಕ್ಕದ್ದು ಎಂದು ಆದೇಶಿಸಿರುವ ಸಂಬಂಧ *ಸದರಿ ಕಾಮಗಾರಿಯನ್ನು ಮೆ//ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಳ್ಳಲು ಮಾನ್ಯ ಆಯುಕ್ತರ ಅನುಮೋದನೆ ಪಡೆದಿರುವ ಸಂಬಂಧ ಯಾವುದೆ ಮಾಹಿತಿ/ದಾಖಲಾತಿಗಳು ಕಡತದಲ್ಲಿ ಲಭ್ಯವಿರುವುದಿಲ್ಲ.*

s. ರಸ್ತೆ ಇತಿಹಾಸದ ದಾಖಲೆ / ಮಾಹಿತಿ ಕಡತದಲ್ಲಿ ಲಭ್ಯವಿಲ್ಲದೇ ಇದ್ದು, ಪ್ರಸ್ತುತ ಉದ್ದೇಶಿಸಿರುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಕ್ಕೆ ಪೂರಕವಾಗಿ ಈ ಹಿಂದೆ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ನಿರ್ವಹಣೆ ಅಂಶಗಳ ವಿವರಗಳನ್ನು ರಸ್ತೆ ಇತಿಹಾಸ **(Road History)** ಪುಸ್ತಕದಲ್ಲಿ ಕಾಮಗಾರಿ ವಿವರಗಳನ್ನು ನಮೂದಿಸಿ, ನಿರ್ವಹಿಸಿರುವ ದಾಖಲೆಗಳ ಮಾಹಿತಿ ಕಡತದಲ್ಲಿ ಕಂಡು ಬರುತ್ತಿಲ್ಲ. ಸದರಿ ರಸ್ತೆಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾದಾಗಿನಿಂದಲೂ ಪಾಲಿಕೆಯ ಸುರ್ಪದಿಯಲ್ಲಿರುತ್ತದೆ. ಆದರೂ ಸಹ, ಅಭಿವೃದ್ಧಿ ಕಾರ್ಯಗಳ ನಿರ್ವಹಣೆ ವಿವರಗಳನ್ನು ರಸ್ತೆಇತಿಹಾಸ **(Road History)** ಪುಸ್ತಕದಲ್ಲಿ ನಮೂದಿಸದೇ ಇರುವುದು ಕಂಡುಬಂದಿರುತ್ತದೆ. ಅಭಿಯಂತರರುಗಳ ಈ ರೀತಿಯ ಬೇಜವ್ದಾರಿ ಕರ್ತವ್ಯ ನಿರ್ವಹಣೆಯಿಂದ ಪಾಲಿಕೆಯ ರಸ್ತೆಗಳ ಅಭಿವೃದ್ಧಿ ಕಾರ್ಯಗಳ ನಿರ್ವಹಣೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಹಾಗೂ ಪಾಲಿಕೆಯ ಆರ್ಥಿಕ ಸ್ಥಿತಿಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. *ಈ ಹಿನ್ನಲೆಯಲ್ಲಿ ಉದ್ದೇಶಿತ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರವು ರಸ್ತೆ ಇತಿಹಾಸ (Road History) ಪುಸ್ತಕದ ಸಂಪೂರ್ಣ ವಿವರಗಳನ್ನೊಳಗೊಂಡ ದಾಖಲೆಗಳನ್ನು ಸಮರ್ಪಕವಾಗಿ ನಿರ್ವಹಿಸಿರುವ ಬಗ್ಗೆ ದೃಢೀಕರಿಸಿಕೊಳ್ಳದೇ ಅಂದಾಜುಪಟ್ಟಿಗೆ ತಾಂತ್ರಿಕ ಮಂಜೂರಾತಿಯನ್ನು ನೀಡಿರುವುದು ಸರಿಯಾದ ಕ್ರಮವಾಗಿರುವುದಿಲ್ಲ.*

t. ಸದರಿ ಅಂದಾಜುಪಟ್ಟಿಯಲ್ಲಿ 1. Earth work excavation 2. Plain cement concrete of mix 1:3:6, 3. M-20 4. Crushing stone bolders 5. TMT Steel 6. P.C.C. Slab 10 cm thick 7.plain cement concrete for pavements of mix M-30. ಗಳಂತಹ ಅಂಶಗಳನ್ನು ಅಳವಡಿಸಿಕೊಂಡಿರುವುದನ್ನು ಗಮನಿಸಲಾಗಿದೆ. ***(ಅಡಕ–ES-14)***

u. ಕಡತದಲ್ಲಿ ಲಗತ್ತಿಸಿರುವ ಅಂದಾಜು ಪಟ್ಟಿಯ ನಕ್ಷೆಯಲ್ಲಿ ಅಳತೆಗಳ, ಅಡಿಗಾಲುವೆಗಳ ವಿವರಗಳು ಲಭ್ಯವಿಲ್ಲದಿರುವುದರಿಂದ ನಕ್ಷೆಯು ಅಪೂರ್ಣವಾಗಿರುತ್ತದೆ.

v. ಸದರಿ ಕಾಮಗಾರಿಗೆ 015–19–000009 ರ ಕಾಮಗಾರಿ ಸಂಖ್ಯೆ ಪ್ರಮಾಣ ಪತ್ರವನ್ನು ದಿನಾಂಕ: 18–01–2019 ರಂದು ಪಡೆಯಲಾಗಿದ್ದು, ಕಡತದಲ್ಲಿ ಮೂಲ ಪ್ರಮಾಣ ಪತ್ರ ಲಭ್ಯವಿರುವುದಿಲ್ಲ.

w. ಪ್ರಸ್ತಾಪಿತ ಕಾಮಗಾರಿಯನ್ನು ಮೇ//ಕೆ.ಆರ್.ಐ.ಡಿ.ಎಲ್‌ಗೆ ವಹಿಸಿರುವುದು ಗಮನಿಸಿದ್ದು, ಸದರಿ ಸಂಸ್ಥೆ ಮುಖಾಂತರ ನಿರ್ವಹಿಸುವುದಕ್ಕೆ ಪೂರಕವಾಗಿ ಕೆ.ಆರ್.ಐ.ಡಿ.ಎಲ್‌ರವರು ಒಪ್ಪಿಗೆ ಸೂಚಿಸಿ, ನೀಡಿರುವ ಸಮ್ಮತಿ ಪತ್ರ ಕಡತದಲ್ಲಿ ಲಭ್ಯವಿಲ್ಲ. ಅಲ್ಲದೇ ಸದರಿ ಕಾಮಗಾರಿಯ ಅಂದಾಜುಪಟ್ಟಿ ತಯಾರಿಕೆ, ಅನುಮೋದನೆಗಳು ಮತ್ತು *ಗುತ್ತಿಗೆ ನೀಡುವ ಪ್ರಕ್ರಿಯೆಗಳನ್ನು ಸರ್ಕಾರದ ಆದೇಶಗಳನ್ವಯ ಮೇ//ಕೆ.ಆರ್.ಐ.ಡಿ.ಎಲ್‌ನ ನಿಗಧಿತNORMSಗಳಂತೆ ನಿರ್ವಹಿಸಿರುವ ಬಗ್ಗೆ ತಾಂತ್ರಿಕ ಮಂಜೂರಾತಿ ನೀಡಿರುವ ಪ್ರಾಧಿಕಾರದಿಂದ ದೃಢೀಕರಿಸಿಕೊಂಡು ನಿಯಮಾನುಸಾರ ಕ್ರಮ ಕೈಗೊಳ್ಳದಿರುವುದು ಕಮಡುಬಂದಿರುತ್ತದೆ.*

x. ಕಡತದಲ್ಲಿ ಲಭ್ಯವಿರುವ ಇ–ಅಳತೆ ಪುಸ್ತಕದಲ್ಲಿ ಅಳತೆಗಳನ್ನು ನಮೂದಿಸಲಾಗಿದ್ದು, ಆದರೆ ನಿಯಮಾನುಸಾರ ಇ–ಅಳತೆ ಪುಸ್ತಕಕ್ಕೆ ಗುತ್ತಿಗೆದಾರರ ಸಹಿ ಇಲ್ಲದಿರುವುದರ ಜೊತೆಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರತಿ ಅಂಶಗಳ ಅಳತೆಗಳಿಗೆ check and found correct

ಎಂದು ಧೃಡೀಕರಿಸದೇ, ದಿನಾಂಕಗಳನ್ನು ಸಹ ನಮೂದಿಸದೇ ***ಬಿಲ್ ಪಾವತಿಗೆ ಸಲ್ಲಿಸಿರುವುದು ಸಮಂಜಸವಾಗಿರುವುದಿಲ್ಲ*** ***(ಅಡಕ–EMB-14)***

A2. ಕಾಮಗಾರಿ ಸ್ಥಳ ಪರಿಶೀಲನೆ ಬಗ್ಗೆ ವರದಿ:–

ಸ್ಥಳ ಪರಿಶೀಲನೆಯನ್ನು ದಿನಾಂಕ: 16–12–2019 ರಂದು ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸಿದಂತಹ ಕಿರಿಯ ಅಭಿಯಂತರರಾದ ಶ್ರೀ.ಚಿತ್ತಯ್ಯ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಶ್ರೀ.ವಿಜಯಕುಮಾರ್ ಹಾಗೂ ಯೋಜನಾ ಸಮಾಲೋಚಕರು ರವರುಗಳೊಡನೆ ಕೈಗೊಳ್ಳಲಾಗಿದ್ದು, ಸದರಿಯವರುಗಳು ಗುರುತಿಸಿ ಕ್ರಿಷ್ಣೇಗೌಡನಗರದ 1ನೇ ಅಡ್ಡರಸ್ತೆಯ ಒಂದು ಬದಿ, ನಾಮಾಂಕಿತವಿಲ್ಲದ ಅಡ್ಡರಸ್ತೆಯ ಎರಡು ಬದಿ, 2ನೇ ಮುಖ್ಯರಸ್ತೆಯ ಎರಡು ಬದಿಯಲ್ಲಿ ಹಾಗೂ ಕ್ರಿಷ್ಣೇಗೌಡನಗರ ಮುಖ್ಯ ರಸ್ತೆಗೆ ಎರಡು ಬದಿಯಲ್ಲಿ ಆರ್.ಸಿ.ಸಿ ಚರಂಡಿ ನಿರ್ವಹಿಸಿರುವುದಾಗಿ ಮತ್ತು ಕ್ರಿಷ್ಣೇಗೌಡನಗರ ಮುಖ್ಯ ರಸ್ತೆ ಹಾಗೂ ಕ್ರಿಷ್ಣೇಗೌಡನಗರದ 1ನೇ ಅಡ್ಡರಸ್ತೆಗಳಿಗೆ ಕಾಂಕ್ರೀಟ್ ಮೇಲ್ಪ್ಪ ಒದಗಿಸಿರುವುದಾಗಿ ಗುರುತಿಸಿ ತೋರಿಸಿರುತ್ತಾರೆ. (ಸ್ಥಳ ತಪಾಸಣಾ ಸಮಯದಲ್ಲಿ ತೆಗೆಯಲಾದ ಛಾಯಾ ಚಿತ್ರಗಳನ್ನು ***ಅಡಕ–PH-14*** ರಲ್ಲಿ ಇರಿಸಿದೆ.

1. ಕ್ರಿಷ್ಣೇಗೌಡನಗರ ಮುಖ್ಯ ರಸ್ತೆಗೆ(From Ramesh road to 1st cross) ಎರಡು ಬದಿಯಲ್ಲಿ ಆರ್.ಸಿ.ಸಿ ಚರಂಡಿಗಳ ಸೆಕ್ಷನ್ ಗಳನ್ನು 0.60 * 0.60 ಮೀ. ಅಳತೆಗಳಿಗೆ ಅಂದಾಜು ಪಟ್ಟಿಯಲ್ಲಿ ಅನುವು ಮಾಡಿದ್ದು, ಸ್ಥಳ ತಪಾಸಣೆ ಸಮಯದಲ್ಲಿ ಸದರಿ ರಸ್ತೆಯಲ್ಲಿ ನಿರ್ವಹಿಸಲಾಗಿರುವ ಚರಂಡಿಯ ಸೆಕ್ಷನ್ ಗಳಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದ್ದರೂ ಸಹ ಅಳತೆ ಪುಸ್ತಕದಲ್ಲಿ ವಾಸ್ತವಿಕ ಸೆಕ್ಷನ್ ಗಳ ಅಳತೆಗಳನ್ನು ದಾಖಲಿಸದೇ ಅಂದಾಜು ಪಟ್ಟಿಯಲ್ಲಿ ಅನುವು ಮಾಡಿಕೊಳ್ಳಲಾದ ಸೆಕ್ಷನ್ 0.60 * 0.60 ಮೀ ಗಳ ಅಳತೆಗಳನ್ನೇ ದಾಖಲಿಸಿ, ***ರೂ.1,34.380/–ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಪಾವತಿ ಮಾಡಿರುವುದು*** ಮತ್ತು ವಾಸ್ತವವಾಗಿ Northern side ಚರಂಡಿಯ ಉದ್ದವು 138 ಮೀ ಇದ್ದರೂ ಅಳತೆ ಪುಸ್ತಕದಲ್ಲಿ 148 ಮೀ ಗಳ ಅಳತೆಗಳಿಗೆ ಚರಂಡಿಯನ್ನು ನಿರ್ವಹಿಸಿರುವುದಾಗಿ ಅಳತೆಗಳನ್ನು ದಾಖಲಿಸಿ, ***10 ಮೀ. ಅಳತೆಗಳನ್ನು ಹೆಚ್ಚುವರಿಯಾಗಿ ಪರಿಗಣಿಸಿ ರೂ.67,840/– ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಪಾವತಿ ಮಾಡಿರುವುದು ಕಂಡುಬಂದಿರುತ್ತದೆ. ಒಟ್ಟಾರೆಯಾಗಿ*** ಚರಂಡಿಯ ಸೆಕ್ಷನ್ ಗಳಲ್ಲಿ ಮತ್ತು ಚರಂಡಿಯ ಉದ್ದದಲ್ಲಿ ***ಹೆಚ್ಚುವರಿಯಾಗಿ ಪರಿಗಣಿಸಿ ರೂ.2,02,220/– ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಬಿಲ್ಲು ಪಾವತಿಗೆ ಕ್ರಮ ವಹಿಸಿರುವುದನ್ನು ಕಂಡುಬಂದಿರುತ್ತದೆ.***
2. ಸ್ಥಳ ತಪಾಸಣೆ ಸಮಯದಲಿ ಕ್ರಿಷ್ಣೇಗೌಡನಗರದ 1ನೇ ಅಡ್ಡರಸ್ತೆಯ (From tumkur road to Ranga nivas #16/7) ಒಂದು ಬದಿ(Eastern SIde) ಆರ್.ಸಿ.ಸಿ ಚರಂಡಿಯನ್ನು 189 ಮೀ ಗಳ ಉದ್ದಕ್ಕೆ ನಿರ್ವಹಿಸಿರುವು ಕಂಡುಬಂದಿದ್ದು, ಅಳತೆ ಪುಸ್ತಕದಲ್ಲಿ ಎರಡು ಬದಿ(Eastern and western SIde) ಆರ್.ಸಿ.ಸಿ ಚರಂಡಿಯನ್ನು ನಿರ್ಮಿಸಿರುವುದಾಗಿ ಅಳತೆಗಳನ್ನು ದಾಖಲಿಸಿರುವುದು ಕಂಡುಬಂದಿದ್ದು, ವಾಸ್ತವವಾಗಿ western SIde ಆರ್.ಸಿ.ಸಿ ಚರಂಡಿಯನ್ನು ನಿರ್ಮಿಸದೇ ಇದ್ದರೂ ಅಳತೆ ಪುಸ್ತಕದಲ್ಲಿ 210 ಮೀ ಗಳ ಅಳತೆಗಳಿಗೆ ಚರಂಡಿಯನ್ನು ನಿರ್ವಹಿಸಿರುವುದಾಗಿ ಅಳತೆಗಳನ್ನು

ದಾಖಲಿಸಿ, *210 ಮೀ. ಅಳತೆಗಳನ್ನು ಹೆಚ್ಚುವರಿಯಾಗಿ ಪರಿಗಣಿಸಿ ರೂ.14,26,162/- ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಬಿಲ್ಲು ಪಾವತಿಗೆ ಕ್ರಮ ವಹಿಸಿರುವುದನ್ನು ಕಂಡುಬಂದಿರುತ್ತದೆ.*,

3. ಸದರಿ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯಲ್ಲಿ ಅಡಿಗಾಲುವೆಗಳಿಗೆ Cast in situ Deckslab(6.00x1.50) ಅನುವು ಮಾಡಿಕೊಂಡಿದ್ದು, ವಾಸ್ತವವಾಗಿ 250 mm thick Pre-cast slab (1.5x0.60) ಒದಗಿಸಿರುವುದಾಗಿ ಹಾಜರಿದ್ದ ಅಭಿಯಂತರರು ಸ್ಥಳ ತಪಾಸಣಾ ಸಮಯದಲ್ಲಿ ತಿಳಿಸಿದ್ದು, ಸ್ಥಳ ತಪಾಸಣಾ ಸಮಯದಲ್ಲಿ 1.20 ಮೀ ಉದ್ದದ ಪಿ.ಸಿ.ಸಿ ಸ್ಲಾಬ್ ಗಳನ್ನು ಮಾತ್ರ ಒದಗಿಸಿದ್ದರೂ ಸಹ ವಾಸ್ತವಿಕ ಅಳತೆಗಳನ್ನು ಇ-ಅಳತೆ ಪುಸ್ತಕದಲ್ಲಿ ದಾಖಲಿಸದೇ ಅಂದಾಜು ಪಟ್ಟಿಯಂತೆ Cast in situ Deckslab(6.00x1.50) ಗಳನ್ನೇ ಒದಗಿಸಿರುವುದಾಗಿ ದಾಖಲಿಸಿರುವುದನ್ನು ಪರಿಗಣಿಸಿದಲ್ಲಿ, ಅಂದಾಜು ಪಟ್ಟಿಯಲ್ಲಿನ ಅಂಶದ specification ಪ್ರಕಾರ ನಿರ್ವಹಿಸಿಲ್ಲದಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಈ ಸಂಬಂಧ ಹಾಜರಿದ್ದ ಅಭಿಯಂತರರನ್ನು ಮೌಖಿಕವಾಗಿ ವಿಚಾರಿಸಲಾಗಿ ಸದರಿಯವರು ಯಾವುದೇ ಪ್ರತಿಕ್ರಿಯೆ ನೀಡದಿರುವುದನ್ನು ಪರಿಗಣಿಸಿದಲ್ಲಿ, *ಸದರಿ ಅಂಶವನ್ನು ಕ್ರಮ ಬದ್ಧವಾಗಿ specification ಪ್ರಕಾರ ನಿರ್ವಹಿಸದೇ ಇದ್ದರೂ ನಿರ್ವಹಿಸಿರುವುದಾಗಿ ಇ-ಅಳತೆ ಪುಸ್ತಕದಲ್ಲಿ ದಾಖಲಿಸಿ ರೂ.1,12,078/- ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಬಿಲ್ಲು ಪಾವತಿಗೆ ಕ್ರಮ ವಹಿಸಿರುವುದನ್ನು ಗಮನಿಸಬಹುದಾಗಿರುತ್ತದೆ.*

4. ಸದರಿ ಕಾಮಗಾರಿಯ ಮಂಜೂರಾದ ಅಂದಾಜು ಪಟ್ಟಿಯಲ್ಲಿನ ಐಟಂ ನಂ. 06ಕ್ಕೆ ಸಂಬಂಧಿಸಿದಂತೆ 10 cm thickness pre-caste slab ಅಂಶವನ್ನು ಚರಂಡಿಗಳಿಗೆ ಹೊದಿಸಿರುವುದಾಗಿ ಹಾಜರಿದ್ದ ಅಭಿಯಂತರರು ಸ್ಥಳ ತಪಾಸಣಾ ಸಮಯದಲ್ಲಿ ತಿಳಿಸಿದ್ದು, ಸ್ಥಳ ತಪಾಸಣಾ ಸಮಯದಲ್ಲಿ ಗಮನಿಸಲಾದಂತೆ ಆಯಾ ರಸ್ತೆಗಳಲ್ಲಿನ ಕೆಲವು ಮನೆಗಳ ಮುಂಭಾಗಗಳಲ್ಲಿ ಹಾಲಿ ಇರುವ (BS Slab) ಗ್ರಾನೈಟ್ ಸ್ಲಾಬ್ ಗಳನ್ನು ತೆರವುಗೋಳಿಸಿ ಅಂದಾಜು ಪಟ್ಟಿಯಂತೆ 10 cm thickness pre-caste slab ಗಳನ್ನು ಒದಗಿಸದೇ ಇ-ಅಳತೆ ಪುಸ್ತಕದಲ್ಲಿ ಪೂರ್ತಿ ಉದ್ದಕ್ಕೆ pre-caste slab ಒದಗಿಸಿರುವುದಾಗಿ ಅಳತೆಗಳನ್ನು ದಾಖಲಿಸಿರುವುದನ್ನು ಗಮನಿಸಲಾಗಿದ್ದು, ಈ ಸಂಬಂಧ ಮನೆಗಳ ಮಾಲೀಕರಗಳನ್ನು ವಿಚಾರಿಸಲಾಗಿ, ಸದರಿ ಕಲ್ಲು ಚಪ್ಪಡಿಗಳನ್ನು ಮನೆಗಳ ಮಾಲೀಕರುಗಳೇ ಅಳವಡಿಸಿಕೊಂಡಿರುವುದಾಗಿ ತಿಳಿಸಿರುವುದರನ್ವಯ, ಸದರಿ (BS Slab) ಗ್ರಾನೈಟ್ ಸ್ಲಾಬ್ *109.90ಮೀ. ಅಳತೆಗಳನ್ನು ಇ-ಅಳತೆ ಪುಸ್ತಕದಲ್ಲಿ ಕಡಿತಗೊಳಿಸದೇ ಇರುವುದರಿಂದ ರೂ.2,18,393/- ಗಳಷ್ಟು ಮೊತ್ತವನ್ನು ಹೆಚ್ಚುವರಿಯಾಗಿ ಬಿಲ್ಲು ಪಾವತಿಗೆ ಕ್ರಮ ವಹಿಸಿರುವುದನ್ನು ಗಮನಿಸಬಹುದಾಗಿದೆ.*

ಮೇಲ್ಕಂಡ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಸದರಿ ಕಾಮಗಾರಿಯ ಚರಂಡಿ ಮತ್ತು ಅಡಿಗಾಲುವೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕದಲ್ಲಿ ದಾಖಲಿಸಿ ಗುತ್ತಿಗೆದಾರರಿಗೆ ಹಣ ಪಾವತಿಗೆ ಸಲ್ಲಿಸಿರುವ ರಸ್ತೆಗಳಿಗೆ ಒದಗಿಸಿರುವ ಕಾಂಕ್ರೀಟ್,ಚರಂಡಿ *ಮತ್ತು ಅಡಿಗಾಲುವೆಗಳ ಅಂಶಗಳ ಪರಿಮಾಣಗಳಿಗೂ ಸ್ಥಳ ತಪಾಸಣೆಯಲ್ಲಿ ಕಂಡುಬಂದಂತಹ ಅಂಶಗಳ ಪರಿಮಾಣಗಳಿಗೂ ಒಂದಕ್ಕೊಂದು ತಾಳೆಯಾಗದೇ ವ್ಯತ್ಯಾಸವಿದ್ದರೂ ಸಹ ವಾಸ್ತವಿಕವಾಗಿ ಅನುಷ್ಠಾನಗೊಳಿಸಿದಂತಹ ಅಂಶಗಳ ಪರಿಮಾಣಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದೇ ಹೆಚ್ಚುವರಿ ಪರಿಮಾಣಗಳನ್ನು ದಾಖಲಿಸಿ ಒಟ್ಟಾರೆಯಾಗಿ ರೂ.19,58,853/-ಗಳ ಮೊತ್ತವನ್ನು ಹೆಚ್ಚುವರಿಯಾಗಿ ಬಿಲ್ಲು ಪಾವತಿಗೆ ಕ್ರಮ ವಹಿಸಿರುವುದು ಗಮನಿಸಲಾಗಿರುತ್ತದೆ.*

Conclusion Item wise

- ಅಡಿಗಾಲುವೆಗಳಿಗೆ specification ಪ್ರಕಾರ ನಿರ್ವಹಿಸದೇ ಇದ್ದರೂ Cast in situ Deckslab(6.00x1.50) ಗಳನ್ನೇ ಒದಗಿಸಿರುವುದಾಗಿ ದಾಖಲಿಸಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ ರೂ. 1,12,078/– ಗಳಷ್ಟು
- ಆರ್.ಸಿ.ಸಿ ಚರಂಡಿಯನ್ನು ನಿರ್ವಹಿಸದೇ ನಿರ್ವಹಿಸಿರುವುದಾಗಿ ಇ–ಅಳತೆ ಪುಸ್ತಕದಲ್ಲಿ ದಾಖಲಿಸಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ ರೂ. 14,26,162/– ಗಳಷ್ಟು
- ನಿರ್ವಹಿಸಲಾಗಿರುವ ಚರಂಡಿಯ ಸೆಕ್ಷನ್ ಗಳಲ್ಲಿ ವ್ಯತ್ಯಾಸವಿರುವುದು ಕಂಡುಬಂದಿದ್ದರೂ ಸಹ ಅಳತೆ ಪುಸ್ತಕದಲ್ಲಿ ವಾಸ್ತವಿಕ ಸೆಕ್ಷನ್ ಗಳ ಅಳತೆಗಳನ್ನು ದಾಖಲಿಸದೇ ಹೆಚ್ಚುವರಿಯಾಗಿ ನೀಡಿರುವ ಮೊತ್ತ ರೂ.1,34.380/–ಗಳಷ್ಟು ಮತ್ತು ಚರಂಡಿಯ ಉದ್ದದಲ್ಲಿ ಹೆಚ್ಚುವರಿಯಾಗಿ ಪರಿಗಣಿಸಿ ಹೆಚ್ಚುವರಿಯಾಗಿ ನೀಡಿರುವ ಮೊತ್ತ ರೂ.67,840/– ಗಳಷ್ಟು
- (BS Slab) ಗ್ರಾನೈಟ್ ಸ್ಲಾಬ್ 109.90ಮೀ. ಅಳತೆಗಳನ್ನು ಇ–ಅಳತೆ ಪುಸ್ತಕದಲ್ಲಿ ಕಡಿತಗೊಳಿಸದೇ ಹೆಚ್ಚುವರಿಯಾಗಿ ನೀಡಿರುವ ಮೊತ್ತ ರೂ.2,18,393/– ಗಳಷ್ಟು

ಕರ್ನಾಟಕ ಲೋಕಾಯುಕ್ತ
ಬೆಂಗಳೂರು

ಸಂಖ್ಯೆ.ಕಂಪ್ಲೇಂಟ್/ಉಪಲೋಕ್/ಬಿಸಿಡಿ/675/2021/ಎಆರ್ಎಲ್ಓ-01 ದಿನಾಂಕ:31/01/2024
ಸಂಖ್ಯೆ. ಲೋಕ್/ಐಎನ್ವಿ(ಟಿ)/ಎಲ್ಎ-228/2022/ಎಇಇ-05

-:ತನಿಖಾವರದಿ:-

ವಿಷಯ:-ಬೆಂಗಳೂರು ಮಹಾನಗರ ಪಾಲಿಕೆ ದಾಸರಹಳ್ಳಿ ವಿಭಾಗದ ಶ್ರೀ ಜಯಲಿಂಗಪ್ಪ, ಕಾರ್ಯಪಾಲಕ ಅಭಿಯಂತರರು(ಪ್ರಭಾರ), ಶೆಟ್ಟಿಹಳ್ಳಿ ಉಪ-ವಿಭಾಗದ ಶ್ರೀ ಕುಮಾರಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಶೆಟ್ಟಿಹಳ್ಳಿ ಉಪ-ವಿಭಾಗದ ವ್ಯಾಪ್ತಿಯಲ್ಲಿರುವ ವಾರ್ಡ್ ನಂ.12 ರ ಶ್ರೀ ಶಿವಕುಮಾರ್, ಸಹಾಯಕ ಅಭಿಯಂತರರು, ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್ ಉಪ-ವಿಭಾಗದ ಶ್ರೀ ತಿಮ್ಮೇಗೌಡ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್ ಉಪ-ವಿಭಾಗದ ವ್ಯಾಪ್ತಿಯಲ್ಲಿರುವ ವಾರ್ಡ್ ನಂ.39 ರ ಶ್ರೀ ಕೃಷ್ಣಪ್ಪ, ಸಹಾಯಕ ಅಭಿಯಂತರರು, ಶ್ರೀ ಚಿತ್ತಯ್ಯ, ಸಹಾಯಕ ಅಭಿಯಂತರರು, T.ದಾಸರಹಳ್ಳಿ ಉಪ-ವಿಭಾಗದ ಶ್ರೀ ವಿಜಯ್ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು, T.ದಾಸರಹಳ್ಳಿ ಉಪ-ವಿಭಾಗದ ವ್ಯಾಪ್ತಿಯಲ್ಲಿರುವ ವಾರ್ಡ್ ನಂ.14 ರ ಶ್ರೀ ಉಮೇಶ್, ಸಹಾಯಕ ಅಭಿಯಂತರರು, ವಾರ್ಡ್ ನಂ.15 ರ ಶ್ರೀಮತಿ ಅರ್ಚನಾ ಮತ್ತು ಹೆಗ್ಗನಹಳ್ಳಿ ಉಪ--ವಿಭಾಗದ ವ್ಯಾಪ್ತಿಯಲ್ಲಿರುವ ವಾರ್ಡ್ ನಂ.71 ರ ಶ್ರೀ ಮಂಜುನಾಥ್, ಸಹಾಯಕ ಅಭಿಯಂತರರು, ಅವರುಗಳ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಿಸಿದ ಸಿವಿಲ್ ಕಾಮಗಾರಿಗಳು ಕಳಪೆಯಾಗಿರುತ್ತದೆ ಹಾಗೂ ಅಂದಾಜುಪಟ್ಟಿಯ ಪ್ರಕಾರ ನಿರ್ವಹಿಸಿರುವುದಿಲ್ಲವೆಂದು ಆಪಾದನೆ ಮಾಡಿರುವ ದೂರಿನ ತನಿಖಾ ವರದಿ

ತನಿಖಾಧಿಕಾರಿಗಳು
ಆರ್.ರವಿಶಂಕರ್
ಕಾರ್ಯಪಾಲಕ ಇಂಜಿನಿಯರ್-02
ತಾಂತ್ರಿಕ ವಿಭಾಗ ಖನಿಜಭವನ
ಕರ್ನಾಟಕ ಲೋಕಾಯುಕ್ತ
ಬೆಂಗಳೂರು.

ಕರ್ನಾಟಕ ಲೋಕಾಯುಕ್ತ ಬೆಂಗಳೂರು

ಕ್ರ.ಸಂ	M-30 grade cement concrete ರಸ್ತೆಯ ದಪ್ಪವನ್ನು (Thickness) ವಿವಿಧ ರಸ್ತೆಗಳಲ್ಲಿನ ವಿವಿಧ Chainageನಲ್ಲಿ ಪರಿಶೀಲಿಸಿರುವ ವಿವರಗಳು		ಅನುಮೋದಿತ ಅಂದಾಜು ಪಟ್ಟಿಯಂತೆ	M-30 grade cement Concrete ರಸ್ತೆಯ ದಪ್ಪವನ್ನು (thickness)ಅಳತೆ ಪುಸ್ತಕದಲ್ಲಿ ನಮೂದಿಸಿರುವುದು.	Tvcc ರವರು ಮರು ಸ್ಥಳ ತನಿಖೆಯ ನಂತರ M-30 grade cement concrete ರಸ್ತೆಯ ದಪ್ಪವನ್ನು(thickness ಅಳತೆ ಪುಸ್ತಕದಲ್ಲಿ ಸೀಮಿತಗೊಳಿಸಿರುವುದು.
		ದಪ್ಪ (Thickness	ದಪ್ಪ (Thickness)	ದಪ್ಪ (Thickness)	ದಪ್ಪ (Thickness)
1	ರಸ್ತೆಯ ಹೆಸರು ಹೋಟೆಲ್ ಅಮೋಘ ಹಿಂಭಾಗದಲ್ಲಿನ ಕಾಂಕ್ರೀಟ್ ರಸ್ತೆ 2ನೇ Core sample Clinical shop ಎದುರುಗಡೆ 2ನೇ Core sample ಡೋರ್ ನಂ.800 ಮನೆ ಮುಂಭಾಗ Model colony ಡೋರ್ ನಂ. 1996 ಮನೆ ಎದುರುಗಡೆ	ದಪ್ಪ 5.50cms 6.50cm 11.10cms	15cms	15cms	ಕಡಿತಗೊಳಿಸಿರುವ ಮೊತ್ತ Rs 9,16,087,=00
					Tvcc ರವರು ಮರು ಸ್ಥಳ ತನಿಖೆಯ ನಂತರ ನಿರ್ಮಿಸಿರುವ RCC drain ನಲ್ಲಿ ಕಡಿತಗೊಳಿಸಿರುವ ಮೊತ್ತ ರೂ 32,73,490=00
	Tvcc ರವರು ಮರು ಸ್ಥಳ ತನಿಖೆಯ ನಂತರನ ಈಗಾಗಲೇ ರೂ 41,89,577=00 ಗಳನ್ನು ಮೊದಲನೇ ಮತ್ತು ಭಾಗಶಃ ಬಿಲ್ಲಿನಲ್ಲಿ ಕಡಿತಗೊಳಿಸಿರುವುದು ಕಂಡುಬಂದಿರುತ್ತದೆ.				

4.10 ವಾರ್ಡ್ ನಂ.15, Job code:15-19-000009 ರ "Improvements to CC Drain and covering slabs at coconut garden roads and krishnegowda layout Surroundings area in ward no 15 Dasarahalli Sub-division" ಕಾಮಗಾರಿಯಲ್ಲಿನ Item no 07 ಆದ " Construction of un-reinforced Plain cement concrete pavement of design mix M30" ಅನ್ನು ಕೃಷ್ಣೇಗೌಡ ಲೇಔಟ್ ಕ್ರಾಸ್ ರೋಡ್‌ನಲ್ಲಿ ಹಾಕಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನು ಪರಿಶೀಲಿಸಲಾಗಿದ್ದು, ಸಿಮೆಂಟ್ ಕಾಂಕ್ರೀಟ್ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ ಹಾಗೂ ಡೋರ್ ನಂ.33/A ಮನೆ ಮುಂಭಾಗ Core cutter ನಿಂದ Concrete Core sample ಅನ್ನು ತೆಗೆದು ಸಿಮೆಂಟ್ ಕಾಂಕ್ರೀಟ್ ರಸ್ತೆಯ Thickness ಅನ್ನು ಪರಿಶೀಲಿಸಲಾಗಿದ್ದು, Thickness 70mm or 7.00 cms ಬಂದಿರುತ್ತದೆ.

4.11 ವಾರ್ಡ್ ನಂ.15, Job code:15-19-000009 ರ "Improvements to CC Drain and covering slabs at coconut garden roads and krishnegowda layout Surroundings area in ward no 15 Dasarahalli Sub-division" ಕಾಮಗಾರಿಯ ಅನುಮೋದಿತ ಅಂದಾಜು ಪಟ್ಟಿ, ಹಾಗೂ ಅಳತೆ ಪುಸ್ತಕಗಳನ್ನು ಪರಿಶೀಲಿಸಲಾಗಿದ್ದು M-30 grade cement concrete ರಸ್ತೆಗಳ ದಪ್ಪವನ್ನು ಈ ಕೆಳಕಂಡಂತೆ ಅಳತೆಪುಸ್ತಕದಲ್ಲಿ ನಮೂದಿಸಿರುತ್ತಾರೆ.

ಕ್ರ.ಸಂ	M-30 grade cement concrete ರಸ್ತೆಯ ದಪ್ಪವನ್ನು (Thickness) ವಿವಿಧ ರಸ್ತೆಗಳಲ್ಲಿನ ವಿವಿಧ Chainageನಲ್ಲಿ ಪರಿಶೀಲಿಸಿರುವ ವಿವರಗಳು		ಅನುಮೋದಿತ ಅಂದಾಜು ಪಟ್ಟಿಯಂತೆ	M-30 grade cement Concrete ರಸ್ತೆಯ ದಪ್ಪವನ್ನು (thickness)ಅಳತೆ ಪುಸ್ತಕದಲ್ಲಿ ನಮೂದಿಸಿರುವುದು.	Tvcc ರವರು ಮರು ಸ್ಥಳ ತನಿಖೆಯ ನಂತರ M-30 grade cement concrete ರಸ್ತೆಯ ದಪ್ಪವನ್ನು(thickness ಅಳತೆ ಪುಸ್ತಕದಲ್ಲಿ ಸೀಮಿತಗೊಳಿಸಿರುವುದು.
		ದಪ್ಪ (Thickness	ದಪ್ಪ (Thickness)	ದಪ್ಪ (Thickness)	ದಪ್ಪ (Thickness)
1	ರಸ್ತೆಯ ಹೆಸರು ಕೃಷ್ಣೇಗೌಡ ಲೇಔಟ್ ಕ್ರಾಸ್ ರೋಡ್‌ನಲ್ಲಿನ ಕಾಂಕ್ರೀಟ್ ರಸ್ತೆ ಡೋರ್ ನಂ.33/A ಮನೆ ಮುಂಭಾಗ	ದಪ್ಪ 7cms	15cms	15cms	7cms ಗಳಿಗೆ ಸೀಮಿತಗೊಳಿಸಿರುತ್ತಾರೆ. ಕಡಿತಗೊಳಿಸಿರುವ ಮೊತ್ತ Rs 2,47,000=00
					Tvcc ರವರು ಮರು ಸ್ಥಳ ತನಿಖೆಯ ನಂತರ ನಿರ್ಮಿಸಿರುವ RCC drain ನಲ್ಲಿ ಕಡಿತಗೊಳಿಸಿರುವ ಮೊತ್ತ ರೂ 19,59,774=00
	Tvcc ರವರು ಮರು ಸ್ಥಳ ತನಿಖೆಯ ನಂತರನ ಈಗಾಗಲೇ ರೂ 22,06,774 ಗಳನ್ನು ಮೊದಲನೇ ಮತ್ತು ಭಾಗಶಃ ಬಿಲ್ಲಿನಲ್ಲಿ ಕಡಿತಗೊಳಿಸಿರುವುದು ಕಂಡುಬಂದಿರುತ್ತದೆ.				

4.12 ವಾರ್ಡ್ ನಂ. 39, Job code: 039-19-000011 ರ "Improvements to roads and drain behind A2B Hotel at vidya Nagara in ward no 39 Chokasandra PIA Sub-division" ಕಾಮಗಾರಿಯಲ್ಲಿನ Item no 16 ರದ " Construction of un-reinforced Plain cement concrete pavement of design mix M30" ಅನ್ನು A to B hotel, 3rd cross ನಲ್ಲಿ ನಿರ್ಮಿಸಿರುವ ಸಿಮೆಂಟ್ ಕಾಂಕ್ರೀಟ್ ರಸ್ತೆಯನ್ನು ಪರಿಶೀಲಿಸಲಾಗಿದ್ದು, ಸಿಮೆಂಟ್ ಕಾಂಕ್ರೀಟ್ ರಸ್ತೆಯು ಸುಸ್ಥಿತಿಯಲ್ಲಿರುತ್ತದೆ. 77ಮೀಟರ್ ಉದ್ದದ ಸಿಮೆಂಟ್ ಕಾಂಕ್ರೀಟ್

4.18 ವಾರ್ಡ್ ನಂ. 14 Job code: 014-19-000058 ರ "Construction of Drain at Panduranga Layout Surrounding in Bhuvaneshwari nagara at Bagalagunte in ward no 14 Dasarahalli Sub-division" ಕಾಮಗಾರಿಯಲ್ಲಿನ RCC Drain and drain ಮೇಲೆ ಅಳವಡಿಸಿರುವ precast covering slab ಯನ್ನು ಪರಿಶೀಲಿಸಲಾಗಿದ್ದು, drain ಮೇಲೆ ಅಳವಡಿಸಿರುವ precast covering slab ಗಳು ಸುಸ್ಥಿತಿಯ ಲ್ಲಿರುತ್ತವೆ. precast covering slab ಗಳ ಮಧ್ಯ ಹಳೆಯ B.S. Slab ಗಳನ್ನು ಹಾಕಿರುವುದು ಕಂಡುಬಂದಿರುತ್ತದೆ. Tvcc ರವರು ಮರು ಸ್ಥಳ ತನಿಖೆಯ ನಂತರ ನಿರ್ಮಿಸಿರುವ RCC drain ನಲ್ಲಿ 1ನೇ ಮತ್ತು ಭಾಗಶಃ ಬಿಲ್ಲಿನಲ್ಲಿ ಒಟ್ಟು ರೂ 23,54,095=00 ಗಳನ್ನು ಕಡಿತಗೊಳಿಸಿರುತ್ತಾರೆ.

4.19 ವಾರ್ಡ್ ನಂ.14 Job code: 014-19-000053 ರ "Construction of Drain at Gangadareshwara Temple Surrounding in Bhuvaneshwari nagara at Bagalagunte in ward no 14 Dasarahalli Sub-division" ಕಾಮಗಾರಿಯಲ್ಲಿನ RCC Drain and drain ಮೇಲೆ ಅಳವಡಿಸಿರುವ precast covering slab ಯನ್ನು ಪರಿಶೀಲಿಸಲಾಗಿದ್ದು, drain ಮೇಲೆ ಅಳವಡಿಸಿರುವ precast covering slab ಗಳು ಸುಸ್ಥಿತಿಯಲ್ಲಿ ರುತ್ತವೆ. precast covering slab ಗಳ ಮಧ್ಯ ಹಳೆಯ B.S. Slab ಗಳನ್ನು ಹಾಕಿರುವುದು ಕಂಡುಬಂದಿರುತ್ತದೆ. Tvcc ರವರು ಮರು ಸ್ಥಳ ತನಿಖೆಯ ನಂತರ ನಿರ್ಮಿಸಿರುವ RCC drain ನಲ್ಲಿ 1ನೇ ಮತ್ತು ಭಾಗಶಃ ಬಿಲ್ಲಿನಲ್ಲಿ ಒಟ್ಟು ರೂ 31,07,558 ಗಳನ್ನು ಕಡಿತಗೊಳಿಸಿರುತ್ತಾರೆ.

4.20 "Bituminous macadam (BM) ಮತ್ತು Bituminous concrete (BC) ನಲ್ಲಿರುವ ಡಾಂಬರ್ ಅಂಶದ ಬಗ್ಗೆಗಿನ "Test Report" ಅನ್ನು ಮತ್ತು ಸದರಿ cement concrete road & R.C.C. drain ಕಾಮಗಾರಿಯಲ್ಲಿ ಉಪಯೋಗಿಸಿರುವ cement concrete strength/ಸಾಮರ್ಥ್ಯವು Specification limit ಗೆ ಅನುಗುಣವಾಗಿ ರುತ್ತದೆ ಎಂದು ವರದಿಯನ್ನು ವಿವರಣಾತ್ಮಕ ಪಟ್ಟಿಯೊಂದಿಗೆ ದಿನಾಂಕ 18-01-2024 (ಸ್ವೀಕೃತಿ ದಿನಾಂಕ 23-01-2024) ರಂದು ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಗುಣ ಭರವಸೆ ಉಪ–ವಿಭಾಗ ಬೆಂಗಳೂರು ರವರು ಸಲ್ಲಿಸಿರುತ್ತಾರೆ.

5.00 ಅಭಿಪ್ರಾಯ

5.01 ದೂರುದಾರರಾದ ಶ್ರೀ ಪಿ.ಸಿದ್ದೇಶ್ ರವರು ತಮ್ಮ ದೂರಿನಲ್ಲಿ ಆರೋಪಿಸಿರುವಂತೆ ಹಾಗೂ ತನಿಖಾ ವರದಿಯ ಹಿಂದಿನ ಕಂಡಿಕೆಗಳಲ್ಲಿ ವರದಿ ಮಾಡಿರುವ ಅಂಶಗಳ ಹಿನ್ನೆಲೆಯಲ್ಲಿ ಸದರಿ ಆಪಾದಿತ ಕಾಮಗಾರಿಗಳಿಂದ ಬೃಹತ್ ಬೆಂಗಳೂರು

ಪುಟ 23 ರಿಂದ 25

ಕರ್ನಾಟಕ ಲೋಕಾಯುಕ್ತ ಬೆಂಗಳೂರು

ಮಹಾನಗರ ಪಾಲಿಕೆಯ TVCC ರವರು ಮರು ಸ್ಥಳ ಪರಿಶೀಲನೆಯ ನಂತರ ಮೂಲ ಬಿಲ್ಲಿನಲ್ಲಿ ಈಗಾಗಲೇ ಹೆಚ್ಚುವರಿ ಮೊತ್ತವನ್ನು ಕಡಿತಗೊಳಿಸಿರುವುದರಿಂದ ಹಾಗೂ ಕಡಿತಗೊಳಿಸಿರುವ ಹೆಚ್ಚುವರಿ ಮೊತ್ತವು ಸರಿಇರುತ್ತದೆ ಎಂದು ಅಭಿಪ್ರಾಯ ಪಡಲಾಗಿದೆ.

5.02 ಸದರಿ ಪ್ರಕರಣದ ಕುರಿತಾಗಿ ದಿನಾಂಕ 18-12-2023 ರಿಂದ ದಿನಾಂಕ 19-12-2023 ರವರೆಗೆ ನಡೆಸಿದ ಸ್ಥಳ ತನಿಖೆಯ ಸ್ಥಳ ಮಹಜರ್‌ನ ಮೂಲ ಪ್ರತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದ ಪಡೆದ ಎಲ್ಲಾ ದಾಖಲೆಗಳನ್ನು ಕಡತದಲ್ಲಿ ಇರಿಸಿದ್ದು ನನ್ನ ಬಳಿ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಇನ್ನಾವುದೇ ದಾಖಲೆಗಳು ಇಲ್ಲವೆಂದು ದೃಢೀಕರಿಸಲಾಗಿದೆ. ಸ್ಥಳ ತನಿಖಾ ಸಮಯದಲ್ಲಿ ತೆಗೆದ GPS ಛಾಯಾ ಚಿತ್ರಗಳನ್ನು ಕಡತದಲ್ಲಿ ಇರಿಸಲಾಗಿದೆ. ತಯಾರಿಸಿದ ತನಿಖಾ ವರದಿಯನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಮಂಡಿಸಿದೆ.

31/01/2024

ಕಾರ್ಯಪಾಲಕ ಅಭಿಯಂತರರು-02
ತಾಂತ್ರಿಕ ವಿಭಾಗ, ಖನಿಜಭವನ
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.